# St. Claret College

Roll No:
Date:

**Autonomous, Bengaluru**

**UG END SEMESTER EXAMINATION-DECEMBER 2024**

**BA I SEMESTER**

**KAA 124: KALA KANNADA**

**TIME: 3 hours.** 2 **MAX.MARKS:80**

**This paper contains Three printed pages and A to I parts**

**Instructions:**
1. Verify and ensure that the question paper is completely printed.
2. Any discrepancies or questions about the exam paper must be reported to the COE within 1 hour after the examination.
3. Students must check the course title and course code before answering the questions.

## PART-A

**ಕೆಳಗಿನ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ** **1 x 6 = 6**

1) ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ
ಮೂಗ್ನಲ್ ಕನ್ನಡ ಪದವಾಡ್ತೀನಿ
ನನ್ನ ಮನಸನ್ನ್ ನೀ ಕಾಣೆ!

ST. CLARET COLLEGE
LIBRARY
Bengaluru-13
AUTONOMOUS

2) ಶಾಖೋಪಶಾಖೆಗಳನ್ನು ಹರಡಿಕೊಂಡು
ನಿಂತ ಈ ಮಹಾ ವೃಕ್ಷಗಳು
ನೆಲದಿಂದಎತ್ತರಕ್ಕೆ ಹರಿದು ಹೋಗುತ್ತಿರುವ
ಸ್ತಬ್ಧವಾದ ಹಸುರಿನ ಪ್ರವಾಹಗಳು!

## PART-B

**ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ** **2 x 2=4**

3) ಜಿ.ಪಿ. ರಾಜರತ್ನಂ
4) ದೇವನೂರು ಮಹಾದೇವ
5) ವೃಕ್ಷಮಾತೆ ತಿಮ್ಮಕ್ಕ
6) ಜಾನಪದ

## PART-C

**ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ.** **4 x 5 = 20**

7) ಮಕ್ಕಳ ಶಿಕ್ಷಣದಲ್ಲಿ ತಾರತಮ್ಯ ಮಾಡುವುದು ಸರಿಯೇ? ಚರ್ಚಿಸಿ.
8) ಸಾಹಿತ್ಯ ವಿಮರ್ಶೆಯಲ್ಲಿಯಾವಯಾವ ಅಂಶಗಳು ಮೂಡಬೇಕು ಎಂದು ಲೇಖಕರು ಆಶಿಸುತ್ತಾರೆ?

9) ಆಗುಂಬೆಯ ಸೂರ್ಯಾಸ್ತಮಾನವನ್ನು ವರ್ಣಿಸಿ.

10) ತಿಮ್ಮಕ್ಕ ಮತ್ತು ಯಕ್ಕಿಯ ಸ್ನೇಹವನ್ನು ಚಿತ್ರಿಸಿರಿ.

11) ಜಲಾಲುದ್ದೀನ್ ಯಾರು? ಕಲಾಂ ಹಾಗು ಜಲಾಲುದ್ದೀನ್ ಯಾವ ವಿಷಯದ ಬಗ್ಗೆ ಚರ್ಚಿಸುತ್ತಿದ್ದರು?

12) ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಚಿಕಿತ್ಸೆ ಹೇಗೆ ಪ್ರಯೋಜನಕಾರಿಯಾಗಿದೆ?

## PART-D

**ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ** **3 x 10 = 30**

13) ಇಂಗ್ಲೀಷ್ ಮಾಧ್ಯಮದ ಮೋಹ, ಮಾತೃಭಾಷಾ ಮಾಧ್ಯಮವು ಅಳಿವಿನಂಚಿಗೆ ಸರಿಯುವಂತೆ ಮಾಡುತ್ತಿದೆಯೇ? ವಿವರಿಸಿ.

14) ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಕೂಸಿನ ಹಿರಿಮೆಯನ್ನು ಕುರಿತು ಬರೆಯಿರಿ.

15) ಗ್ರಾಮದೇವತೆಯ ಹಬ್ಬದ ಪ್ರಸಂಗವನ್ನು ವಿವರಿಸಿ.

16) ಭವಿಷ್ಯದ ಸಮಾಜವನ್ನು ಕುರಿತು ಲೇಖಕರ ನಿರೀಕ್ಷೆಗಳನ್ನು ವಿಶ್ಲೇಷಿಸಿ.

17) ಅಬ್ದುಲ್ ಕಲಾಂ ಅವರ ಜೀವನದ ಶಿಸ್ತು ಮತ್ತು ಆದರ್ಶ ಗುಣಗಳನ್ನು ಪರಿಚಯಿಸಿ.

## PART-E

**18)ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಬರೆಯಿರಿ.**

**1 x 5 = 5**

ಹಿಂದಿನ ಮದ್ರಾಸ್ ರಾಜ್ಯದ ಒಂದು ದ್ವೀಪ ಪಟ್ಟಣವಾದ ರಾಮೇಶ್ವರಂನ ಮಧ್ಯಮ ವರ್ಗದ ತಮಿಳು ಕುಟುಂಬದಲ್ಲಿ ನಾನು ಹುಟ್ಟಿದೆ. ನನ್ನ ತಂದೆ ಜೈನುಲಾಬೀನ್ ಹೆಚ್ಚೇನೂ ಓದಿಲ್ಲದ ಬಡ ಹಳ್ಳಿಗರಾದರೂ ಅವರಲ್ಲಿ ಅಸದೃಶ್ಯವಾದ ಪ್ರಪಂಚ ಜ್ಞಾನ ಮತ್ತು ಮಾನವೀಯತೆ ತುಂಬಿ ತುಳುಕುತಿತ್ತು. ಇವರಿಗೆ ತಕ್ಕುದಾದ ಜೋಡಿ ನನ್ನ ತಾಯಿ ಅಶಿಯಮ್ಮ, ಈ ತಾಯಿ ದಿನವೂ ಅದೆಷ್ಟು ನಿರಾಶ್ರಿತರಿಗೆ ಅನ್ನವಿಕ್ಕಿದ್ದಾಳೆ ತಿಳಿಯದು! ಆದರೆ ಎಷ್ಟು ಜನರು ಮನೆಯವರಾಗಿದ್ದರೋ ಅವರಿಗಿಂತ ಜಾಸ್ತಿ ಸಂಖ್ಯೆಯಲ್ಲಿ ಹೊರಗಿನ ಜನರು ನಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದರು. ಈ ಜೋಡಿ ಒಂದು ಆದರ್ಶವಾದದ್ದು ಎಂದು ಇಡೀ ಊರೇ ಒಪ್ಪುತ್ತಿತ್ತು.

## PART-F

**ಕೆಳಗಿನ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.** **2 x 1 = 2**

19) ಪ್ರಪಂಚ

20) ರೆಕ್ಕೆಗಳು

21) ಮನೋರೋಗ

22) ತಾರತಮ್ಯ

## PART-G

23) ವ್ಯಾಸಂಗ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ. **1 x 4 = 4**

## PART-H

ಕೆಳಗಿನ ಪದಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **1x 4 = 4**

24) ಖತ್ನ
25) ಚಿಲುಮೆ
26) ದೃಷ್ಟಿತೆಗೆ
27) ಕಾರ್ಮೋಡ
28) ಬ್ಯಾಸರಿಕೆ

## PART-I

ಇವುಗಳಿಗೆ ಸರಿ ಉತ್ತರವನ್ನು ಬರೆಯಿರಿ. (ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ) **5 x 1 = 5**

**29)ಕುಸುಮ ಬಾಲೆ ದೇವನೂರರ**

ಅ) ಕಾದಂಬರಿ ಆ) ಕಥೆ
ಇ) ಕಾವ್ಯ ಈ) ನಾಟಕ

**30) ನಾವು ಆಕಾಶದ ಕನಸು ಕಾಣುವವರೆಂದು ಹೇಳಿದವರು**

ಅ) ಬಿ.ಎಂ ಶ್ರೀಕಂಠಯ್ಯ ಆ) ಮೂಡ್ನಾಕೂಡು ಚಿನ್ನಸ್ವಾಮಿ
ಇ) ಕುವೆಂಪು ಈ) ಜಿ. ಎಸ್. ಶಿವರುದ್ರಪ್ಪ

**31) ಬಿ.ಜಿ.ಎಲ್ ಸ್ವಾಮಿಯವರ ಆಗುಂಬೆಯ ಮಳೆ ಪಾತದ ಆಕರ ಕೃತಿ**

ಅ) ಬೃಹದಾರಣ್ಯಕ ಆ) ಹಸಿರು ಹೊನ್ನು
ಇ) ಕಾಲೇಜು ರಂಗ ಈ) ಅಮೇರಿಕಾದಲ್ಲಿ ನಾನು

**32) ಅಪ್ಪನ ಜೊತೆಗೆ ದಿನವೂ ಸಂಜೆ ಕಲಾಮ್ ಹೋಗುತ್ತಿದ್ದ ಸ್ಥಳ**

ಅ) ಶಿವನ ದೇವಸ್ಥಾನ ಆ) ಉದ್ಯಾನವನ
ಇ) ಹಳೆಯ ಮಸೀದಿ ಈ) ಗ್ರಂಥಾಲಯ

**33) ಈಗ ಇಂಗ್ಲೆಂಡಿನಲ್ಲಿ ಇರುವ ಆಡಳಿತ ವ್ಯವಸ್ಥೆ**

ಅ) ರಾಜ್ಯಾಡಳಿತ ಆ) ಮಿಲಿಟರಿ ಆಡಳಿತ
ಇ) ಸರ್ವಾಧಿಕಾರಿ ಆಡಳಿತ ಈ) ಪ್ರಜಾಪ್ರಭುತ್ವ

****